

# ಉಡುಗೊರೆ

ಒಂದೂರಿನಲ್ಲಿ ಸಿದ್ದಪ್ಪನೆಂಬ ಬಡಗಿ ಇದ್ದನು. ಅವನು ಕಟ್ಟಡಗಳನ್ನು ನಿರ್ಮಾಣ ಮಾಡುವ ಗುತ್ತಿಗೆದಾರ ಶಂಕರಪ್ಪನ ಕೈ ಕೆಳಗೆ ಕೆಲಸ ಮಾಡಿಕೊಂಡಿದ್ದನು. ಅವನು ಸುಮಾರು 30 ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ ಶಂಕರಪ್ಪ ಅವನ ಸಂಬಳದಲ್ಲಿ ಒಂದೇ ಒಂದು ರೂಪಾಯಿಯನ್ನು ಏರಿಕೆ ಮಾಡಿರಲಿಲ್ಲ. ಇದರಿಂದ ಸಿದ್ದಪ್ಪ ಸಹಜವಾಗಿಯೇ ಬೇಸರಗೊಂಡಿದ್ದ.

ಹೀಗಿರುವಾಗ ಸಿದ್ದಪ್ಪ ಅದೇ ಊರಿನ ಇನ್ನೊಬ್ಬ ಹೆಚ್ಚಿಗೆ ಸಂಬಳ ಕೊಡುವ ಕಟ್ಟಡ ಮಾಲೀಕನ ಬಳಿ ಕೆಲಸಕ್ಕೆ ಸೇರಿಕೊಳ್ಳುವ ಯೋಚನೆ ಮಾಡುತ್ತಿದ್ದ. ಆ ಮಾಲೀಕ ಸಿದ್ದಪ್ಪನಿಗೆ ಶಂಕರಪ್ಪ ಕೊಡುತ್ತಿದ್ದ ಸಂಬಳಕ್ಕಿಂತ ಹೆಚ್ಚಿಗೆ ಸಂಬಳ ಕೊಡುತ್ತೇನೆಂದು ಆಸೆ ತೋರಿಸಿದ. ಮಾರನೆಯ ದಿನ ಸಿದ್ದಪ್ಪ ತಾನು ಕೆಲಸ ಬಿಡುವುದಾಗಿ ಶಂಕರಪ್ಪನಿಗೆ ತಿಳಿಸಿದ. ಆಗ ಶಂಕರಪ್ಪ, 'ನೀನು ನನ್ನ ಬಳಿ 30 ವರ್ಷಗಳಿಂದಲೂ ಕೆಲಸ ಮಾಡಿಕೊಂಡು ಬಂದಿರುವೆ. ಈಗ ಹೀಗೆ ಏಕಾ ಏಕಿ ನನ್ನನ್ನು ಬಿಟ್ಟು ಹೋಗುತ್ತಿರುವುದು ತುಂಬಾ ಬೇಸರದ ವಿಷಯವಾಗಿದೆ. ಇಷ್ಟು ವರ್ಷ ನಾನು ನಿನಗೆ ವಹಿಸಿದ ಎಲ್ಲಾ ಕೆಲಸಗಳನ್ನೂ, ಅಚ್ಚುಕಟ್ಟಾಗಿ ಮಾಡಿಕೊಂಡು ಬಂದಿರುವೆ. ಈಗ ನೀನು ನನ್ನನ್ನು ಬಿಟ್ಟು ಹೋಗುವ ಮುನ್ನ, ಕೊನೆಯದಾಗಿ ಒಂದೇ ಒಂದು ಮನೆಯ ಕೆಲಸ ಮಾಡಿಕೊಟ್ಟು ಹೋಗು, ಇಲ್ಲವೆನ್ನಬೇಡ' ಎಂದ. ಸಿದ್ದಪ್ಪ ಅದಕ್ಕೆ ಒಪ್ಪಿದನಾದರೂ ಅವನು ಹೊಸ ಮಾಲೀಕನ ಬಳಿ ಕೆಲಸಕ್ಕೆ ಸೇರಿಕೊಳ್ಳುವ ಉತ್ಸಾಹದಲ್ಲಿದ್ದ. ಅವನು ಮುತುವರ್ಜಿವಹಿಸದೆ ಬೇಜವಾಬ್ದಾರಿತನದಿಂದ ಶಂಕರಪ್ಪ ವಹಿಸಿದ ಕೆಲಸವನ್ನು ಮುಗಿಸಿಕೊಟ್ಟ. ಅವನಿಗೆ ತಾನು ಕೊನೆಯದಾಗಿ ನಿರ್ಮಿಸಿದ ಮನೆಯ ಬಡಿಗಿ ಕೆಲಸವನ್ನು ಸಮರ್ಪಕವಾಗಿ ಮಾಡದೇ ಇರುವುದರಿಂದ ಆ ಮನೆ ಕೇವಲ ಕೆಲವೇ ವರ್ಷಗಳಲ್ಲಿ ಕುಸಿದು ಬೀಳಬಹುದೆಂಬ ನಂಬಿಕೆ ಬಲವಾಗಿ ಮೂಡಿತ್ತು. ತಾನು ಇಷ್ಟು ವರ್ಷ ಕೆಲಸ ಮಾಡಿದರೂ ಮಾಲೀಕ ತನ್ನ ಸಂಬಳವನ್ನು ಹೆಚ್ಚಿಸುವ ಗೋಜಿಗೇ ಹೋಗಲಿಲ್ಲ. ಅದಕ್ಕೆ ಅವನಿಗೆ ತಕ್ಕ ಶಾಸ್ತಿಯಾದಂತಾಯಿತು ಎಂದುಕೊಂಡ. ಅವನು ಶಂಕರಪ್ಪನಿಗೆ, 'ನೀವು ನನಗೆ ವಹಿಸಿದ ಕೊನೆಯ ಕೆಲಸವನ್ನು ಪೂರ್ತಿಗೊಳಿಸಿದ್ದೇನೆ' ಎಂದು ಹೇಳಿದ.

ಅದಕ್ಕೆ ಶಂಕರಪ್ಪ, 'ಇಷ್ಟು ವರ್ಷ ನೀನು ನನ್ನ ಬಳಿ ಪ್ರಾಮಾಣಿಕತೆಯಿಂದ ಆತ್ಮಸಾಕ್ಷಿಯಾಗಿ ಕೆಲಸ ಮಾಡಿಕೊಂಡು ಬಂದಿದ್ದೀಯ. ಅದಕ್ಕೆ ನಾನು ನಿನಗೆ ಉಡುಗೊರೆಯಾಗಿ ನೀನು ಈಗ ತಾನೇ ಪೂರ್ತಿಗೊಳಿಸಿರುವ ಮನೆಯನ್ನು ನೀಡುತ್ತಿದ್ದೇನೆ' ಎಂದು ಹೇಳುತ್ತ ಆ ಮನೆಯ ಬೀಗದ ಕೈಯನ್ನು ಅವನಿಗೆ ನೀಡಿದ. ತಕ್ಷಣವೇ ಸಿದ್ದಪ್ಪನಿಗೆ ಏನು ಹೇಳಬೇಕೆಂಬುದೇ ತೋಚಲಿಲ್ಲ. ಆಗ ಸಿದ್ದಪ್ಪ, 'ಛೇ ಎಂತಹ ಕೆಲಸವಾಯಿತು. ಈ ಯಜಮಾನನ ಮನಸ್ಸನ್ನು ನಾನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಹೋದೆನಲ್ಲ. ಈ ಮನೆಯ ಕೆಲಸವನ್ನು ನಾನು ಅಚ್ಚುಕಟ್ಟಾಗಿ ಮಾಡಿದರೆ ನನಗೊಂದು ಸುಸಜ್ಜಿತವಾದ ಮನೆ ದೊರಕುತ್ತಿತ್ತು. ಅವಸರ ಪಟ್ಟು ಎಡವಟ್ಟು ಮಾಡಿಕೊಂಡುಬಿಟ್ಟೆನಲ್ಲಾ' ಎಂದು ಪೇಚಾಡುತ್ತ ಪಶ್ಚಾತ್ತಾಪದಿಂದ ಬೆಂದು ಹೋದ. ಅತ್ತ ಶಂಕರಪ್ಪ ತನ್ನ ಕೈ ಕೆಳಗೆ ಇಷ್ಟು ವರ್ಷ ಕೆಲಸ ಮಾಡಿದ ಸಿದ್ದಪ್ಪನಿಗೆ ಒಂದು ಒಳ್ಳೆಯ ಉಡುಗೊರೆಯನ್ನು ನೀಡಿದ್ದಕ್ಕಾಗಿ ಸಂಭ್ರಮಪಡುತ್ತಿದ್ದ.

*